# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗಾಳಿ ಆಂಜನೇಯ ಸ್ವಾಮಿ ವಾರ್ಡ್ ಸಂಖ್ಯೆ-157, ಶ್ರೀ ಬಾಲಗಂಗಾಧರನಾಥ ಸ್ವಾಮಿಜಿ ಉದ್ಯಾನವನ, ಟೆಲಿಕಾಂ ಲೇಔಟ್, ಬ್ಯಾಟರಾಯನಪುರ, ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಳಿ/ಪಿಆರ್/101/22-23 07/05/2022 ದಿನಾಂಕ:-07-05-2022

ವಾರ್ಡ್ ಸಂಖ್ಯೆ : 157 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀ ಮಂಗಲ್ ದಾಸ್ | ನೋಡೆಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀ. ರಘುನಾಥ್ .ಕೆ.ಎನ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ಜನಾರ್ಧನ್ | ಕಂದಾಯ ಅಧಿಕಾರಿ | ಹಾಜರಾಗಿರುತ್ತಾರೆ |
| 4 | ಶ್ರೀ. ಮಂಜುನಾಥ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 5 | ಶ್ರೀಮತಿ. ಉಷಾ ರಾಣಿ | ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 6 | ಶ್ರೀ. ಬೆಟ್ಟಸ್ವಾಮಿ | ಸ್ಯಾ.ಧಪೇದಾರ್ | ಹಾಜರಾಗಿರುತ್ತಾರೆ |
| 7 | ಶ್ರೀ. ಮಂಜುನಾಥ್ | ಸದಸ್ಯರು | ಹಾಜರಾಗಿರುತ್ತಾರೆ |
| 8 | ಭಾನುಶ್ರೀ | ಕಿ.ಅ (ಗುತ್ತಿಗೆ ಆದಾರದ ಮೇಲೆ) | ಹಾಜರಾಗಿರುತ್ತಾರೆ |

## <u>ಸಭೆಗೆ ಹಾಜರಿದ್ದ ಸಾರ್ವಜನಿಕರು</u>

1. ಶ್ರೀ. ಕಿಟ್ಟಿ
2. ಶ್ರೀ. ಹೊಂಬೇಗೌಡ

ದಿನಾಂಕ:-07-05-2022 ರಂದು ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ : 157 ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಹಾಗೂ ಶ್ರೀ. ರಘುನಾಥ್ .ಕೆ.ಎನ್. ಕಾರ್ಯದರ್ಶಿ ರವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಅಂಗನವಾಡಿ ಶಾಲೆ ಮತ್ತು ಕಟ್ಟಡಗಳು ಶಿಥಿಲಗೊಂಡಿರುವುದರಿಂದ ಅದನ್ನು ಹೊಡೆದು ಹಾಕಿ ಹೊಸದಾಗಿ ಕಟ್ಟಡವನ್ನು ಕಟ್ಟುವಂತೆ ಶ್ರೀ.ಮಂಜುನಾಥ್ ರವರು ಕೋರಿದರು. | ಕ್ರಮ : ಈ ವಿಚಾರವಾಗಿ ಮಾನ್ಯ ಅಧ್ಯಕ್ಷರು ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯುವುದಾಗಿ ತಿಳಿಸಿದರು. |
| 2 | ನ್ಯೂ ಟಿಂಬರ್ ಯಾರ್ಡ್ ಲೇಔಟ್‌ನಲ್ಲಿ ಬೆಸ್ಕಾಂ ಇಲಾಖೆಯವರು ಕಂಬಗಳನ್ನು ಎಲ್ಲೆಂದರಲ್ಲಿ ಬಿಸಾಕಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದೆ ಎಂದು ಶ್ರೀ.ಮಂಜುನಾಥ್ ರವರು ಕೋರಿದರು. | ಕ್ರಮ : ಈ ವಿಚಾರವಾಗಿ ಬೆಸ್ಕಾಂ ಇಲಾಖೆಗೆ ನೋಟೀಸ್ ನೀಡುವುದಾಗಿ ತಿಳಿಸಲಾಗಿದೆ. |
| 3 | ಎಲ್ಲೆಂದರಲ್ಲಿ ರಸ್ತೆಯನ್ನು ಅನಧಿಕೃತವಾಗಿ ಅನುಮತಿ ಇಲ್ಲದೆ ಕತ್ತರಿಸಿರುವುದಾಗಿ ಶ್ರೀ.ಮಂಜುನಾಥ್ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಗೆ ನೋಟೀಸ್ ನೀಡುವುದಾಗಿ ತಿಳಿಸಲಾಗಿದೆ. |
| 4 | ಸಂಚಾರಿ ಪೋಲೀಸ್ ರವರು ಸಣ್ಣ ಪುಟ್ಟ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ನಿಂತುಕೊಂಡು ಕಾರ್ಯ ನಿರ್ವಹಿಸಿರುತ್ತಾರೆ, ಆದರೆ ಮುಖ್ಯರಸ್ತೆಗಳಲ್ಲಿ ಕಾರ್ಯನಿರ್ವಹಿಸುವಂತೆ ಸೂಚಿಸಬೇಕೆಂದು ಸಭೆಯಲ್ಲಿ ಶ್ರೀ.ಮಂಜುನಾಥ್ ರವರು ತಿಳಿಸಿದರು. | ಕ್ರಮ : ಸದರಿ ಇಲಾಖೆಗೆ ಈ ವಿಚಾರವಾಗಿ ಪತ್ರ ಬರೆಯುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 5 | ಟಿಂಬರ್ ಯಾರ್ಡ್ ಮತ್ತು ಎನ್.ಎ.ಕೆ. ಕಲ್ಯಾಣ ಮಂಟಪದ ಹತ್ತಿರ ಕಾಮಗಾರಿಯನ್ನು ಕೈಗೊಂಡು ಡೆಬ್ರಿಸ್‌ನ್ನು ಹಾಗೆ ಬಿಟ್ಟಿರುವುದಾಗಿ ಶ್ರೀ.ಕಿಟ್ಟಿ ರವರು ತಿಳಿಸಿದರು. | ಕ್ರಮ : ಕ್ರಮಕೈಗೊಳ್ಳುವುದಾಗಿ ತಿಳಿಸದರು. |
| 6 | ನಿರ್ಭಯ ಅನುದಾನದಡಿಯಲ್ಲಿ ಸಿ.ಸಿ. ಕ್ಯಾಮರವನ್ನು ಅಳವಡಿಸಲು ಸಂಚಾರಿ ಪೋಲೀಸ್ ಇಲಾಖೆ ರವರಿಗೆ ತಿಳಿಸಲು ಶ್ರೀ.ಮಂಜುನಾಥ್ ರವರು ಕೋರಿದರು. | ಕ್ರಮ : ಸದರಿ ಇಲಾಖೆಗೆ ಈ ವಿಚಾರವಾಗಿ ಪತ್ರ ಬರೆಯುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀ. ರಘುನಾಥ್ .ಕೆ.ಎನ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 157 (ಗಾಳಿ ಆಂಜನೇಯ ಸ್ವಾಮಿ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.